ಕಥೋಪದೇಶ

## ಪಂಚತಂತ್ರ ಕಥೆ

### ಕತ್ತೆಯ ಸಂಗೀತಕ್ಕೆ ಸಿಕ್ಕ ಉಡುಗೊರೆ



ಒಂದು ಊರಿನಲ್ಲಿ ಉದ್ಧತ ಎಂಬ ಹೆಸರಿನ ಕತ್ತೆ ಇತ್ತು. ಪ್ರತಿದಿನ ಹಗಲಿನಲ್ಲಿ ಅಗಸನ ಹೊರೆಗಳನ್ನು ಹೊತ್ತು, ರಾತ್ರಿಯಲ್ಲಿ ಮನಬಂದಂತೆ ಸಂಚರಿಸುತ್ತಿತ್ತು. ಮುಂಜಾನೆ ತಾನೇ ಅಗಸನ ಮನೆಗೆ ಬಂದುಬಿಡುತ್ತಿತ್ತು.

ಒಮ್ಮೆ ಅದಕ್ಕೆ ಒಂದು ನರಿಯ ಜೊತೆಗೆ ಸ್ನೇಹವಾಯಿತು. ಕತ್ತೆ ನಿತ್ಯವೂ ರಾತ್ರಿ ಹೊಲದಲ್ಲಿ ಮೆಯ್ದು, ಬೆಳಗ್ಗೆ ಮನೆ ಸೇರಿಕೊಳ್ಳುವ ಅಭ್ಯಾಸ ಬೆಳೆಸಿಕೊಂಡಿತ್ತು. ಒಂದು ರಾತ್ರಿ ಕತ್ತೆ ನರಿಗೆ ಹೇಳಿತು: "ಮಿತ್ರಾ, ಇಂದು ಬೆಳದಿಂಗಳು ಎಷ್ಟೊಂದು ಹಿತವಾಗಿದೆ! ನನಗೆ ಹಾಡಬೇಕೆಂಬ ಆಸೆ ಉಂಟಾಗಿದೆ. ಯಾವ ರಾಗದಲ್ಲಿ ಹಾಡಲಿ, ನೀನೇ ಹೇಳು?" ಅದಕ್ಕೆ ನರಿ ಉತ್ತರಿಸಿತು: "ಮಾವಾ, ಎಂತಹ ವಿಚಿತ್ರ ಆಸೆ ನಿನ್ನದು. ಇದರಿಂದ ವಿನಾಕಾರಣ ನಾವು ಪೇಚು ತಂದುಕೊಳ್ಳುತ್ತೇವೆ. ಮೊದಲೇ ನಮ್ಮದು ಕಳ್ಳತನದ ವ್ಯವಹಾರ. ಕಳ್ಳರು, ಅನೀತಿವಂತರು ಸಾಧ್ಯವಾದಷ್ಟು ಬಾಯಿ ಬಿಡದೆ ಇದ್ದರೆ, ಅವರಿಗೇ ಒಳ್ಳೆಯದು."

"ಅಷ್ಟು ಮಾತ್ರವಲ್ಲ, ನಿನಗೆ ಉಳಿದವರಂತೆ ಒಳ್ಳೆಯ ಕಂಠ ಬೇರೆ ಇಲ್ಲ. ಮಹಾ ಕರ್ಕಶ. ಇದನ್ನು ಕೇಳಿ, ಕಾವಲುಗಾರರಿಗೆ ಎಚ್ಚರವಾಗುವುದು. ಅವರು ಎದ್ದುಬಂದು ನಮ್ಮಿಬ್ಬರನ್ನೂ ಹೊಡೆದು ಕೊಂದಾರು. ಸುಮ್ಮನೇ ಸವತೇಕಾಯಿ ತಿಂದು ಹೋಗೋಣ, ಸಾಕು. ಮಧ್ಯರಾತ್ರಿಯಲ್ಲಿ ನಿನ್ನ ಸಂಗೀತ ಕಛೇರಿ ಯಾರಿಗೆ ತಾನೆ ಬೇಕು?"

ಆಗ ಕತ್ತೆ "ಛೇ, ನೀನು ಎಷ್ಟಾದರೂ ಕಾಡಿನ ಪಶು. ನಿನಗೆ ರಸಿಕತೆಯೇ ಇಲ್ಲ" ಎಂದು ಹೀಗಳೆಯಿತು. ಆಗ ನರಿ ಮತ್ತೆ ಎಚ್ಚರಿಸಿತು, "ಮಾವಾ, ನೀನು ಏನೇ ಅನ್ನು, ನಿನ್ನ ಸಂಗೀತ ಕರ್ಣಕಠೋರ. ಮಲಗಿದವರು ಎಚ್ಚರವಾಗುತ್ತಾರೆ." ಕತ್ತೆ ಠೇಂಕರಿಸಿತು, "ಹುಚ್ಚಾ, ನೀನು ಸಂಗೀತಶಾಸ್ತ್ರ ಅರಿಯದ ಮೂರ್ಖ." ಹಟಮಾರಿ ಕತ್ತೆಗೆ ಬುದ್ಧಿ ಹೇಳಲಾಗದೆ, ನರಿ ಅಡಗಿಕೊಂಡಿತು. ಕತ್ತೆ ತನ್ನ ಕರ್ಕಶ ರಾಗ ಆರಂಭಿಸಿದಾಗ, ಹೊಲ ಕಾಯುವವನು ಎದ್ದು ಬಂದು ಮನಬಂದಂತೆ ಹೊಡೆದನು. ಅಷ್ಟು ಮಾತ್ರವಲ್ಲದೆ, ಒಂದು ಗುಂಡುಕಲ್ಲನ್ನು ಅದರ ಕತ್ತಿಗೆ ಕಟ್ಟಿದನು. ಚೇತರಿಸಿಕೊಂಡ ಕತ್ತೆ, ಗುಂಡುಕಲ್ಲನ್ನು ಎಳೆಯುತ್ತ ಓಡುವುದನ್ನು ಕಂಡು ನರಿ ಹೀಗೆ ಹೇಳಿತು:

ಸಾಧು ಮಾತುಲ ಗೀತೇನ ಮಯಾ ಪ್ರೋಕ್ತೋಽಪಿ ಚ ಸ್ಥಿತಃ ।

"ಮಾವ, ಈಗ ನಿನಗೆ ತಕ್ಕ ಶಾಸ್ತಿಯಾಯಿತು. ನನ್ನ ಮಾತನ್ನು ನೀನು ಅಲಕ್ಷಿಸಿದೆ. ಅದರ ಪ್ರತಿಫಲ ಹೀಗಾಯಿತು. ನಿನ್ನ ಸುಶ್ರಾವ್ಯ ಸಂಗೀತಕ್ಕೆ ತಕ್ಕ ಉಡುಗೊರೆ ಸಿಕ್ಕಿತು."

ನೀತಿ: ನಮ್ಮ ಹಿತೈಷಿಗಳು ಹೇಳುವ ಬುದ್ಧಿವಾದವನ್ನು ಕೇಳಬೇಕು. ಇಲ್ಲದಿದ್ದರೆ ನಾವು ಅನರ್ಥಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ.

## ಸಂಸ್ಕೃತಿ ಪರಿಚಯ

### ವೈದಿಕ ಸಂಸ್ಕೃತಿ

ವೇದವೆಂದರೆ ಜ್ಞಾನ. ಜ್ಞಾನವೆಂದರೆ ಆಧ್ಯಾತ್ಮಿಕ ಜ್ಞಾನ. ವೇದಾರ್ಥವನ್ನು ತಿಳಿಯಬೇಕಾದರೆ ಷಡಂಗಗಳು, ಇತಿಹಾಸ, ಪುರಾಣಗಳು ಅತ್ಯಾವಶ್ಯಕ. ಇದಕ್ಕಾಗಿ ಇರುವ ವಿದ್ಯೆಗಳನ್ನು **ವೈದಿಕ ವಾಙ್ಮಯ** ಎಂದು ಕರೆಯುತ್ತಾರೆ. ವೇದಗಳ ಕಾಲದ ಬಗ್ಗೆ ತುಂಬ ಭಿನ್ನಾಭಿಪ್ರಾಯಗಳಿವೆ. ಆದರೆ ಅವುಗಳಲ್ಲಿ ಪ್ರಾಚೀನವಾದ ಋಗ್ವೇದವು ಕ್ರಿ.ಪೂ ೩೦೦೦ಕ್ಕಿಂತ ಹಿಂದಿನದೆಂದು ಹೇಳಬಹುದು. ವೈದಿಕ ಗ್ರಂಥಗಳು ನಾಲ್ಕು ಬಗೆಯ ಗ್ರಂಥಗಳನ್ನು ಒಳಗೊಂಡಿದೆ. ಅವೆಂದರೆ, **ಋಗ್ವೇದ, ಯಜುರ್ವೇದ, ಸಾಮವೇದ** ಮತ್ತು **ಅಥರ್ವಣವೇದ**. ಪ್ರತಿಯೊಂದರಲ್ಲಿಯೂ ನಾಲ್ಕು ಭಾಗಗಳಿವೆ. ೧. **ಸಂಹಿತೆ ಅಥವಾ ಮಂತ್ರಗಳು** – ಯಜ್ಞಗಳಲ್ಲಿ ಉಪಯೋಗಿಸುವ ಮಂತ್ರಗಳು ೨. **ಬ್ರಾಹ್ಮಣಗಳು**: ಯಜ್ಞಕ್ರಿಯೆಗಳ ವಿಸ್ತಾರವಾದ ವರ್ಣನೆ ಇದರಲ್ಲಿವೆ. ೩. **ಆರಣ್ಯಕಗಳು**: ಇವು ಮಾನಸಿಕ ಉಪಾಸನೆ ಅಥವಾ ಧ್ಯಾನವಿಧಾನಗಳನ್ನು ಹೊಂದಿವೆ. ೪. **ಉಪನಿಷತ್ತುಗಳು**: ಇವು ವೇದದ ಜ್ಞಾನಕಾಂಡ ಎನಿಸಿಕೊಂಡಿವೆ. ವೇದಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವ ಗ್ರಂಥಗಳು ವೇದಾಂಗಗಳು. ಅವು ಯಾವುವೆಂದರೆ, **ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ**.

ಋಷಿಗಳು ತಮ್ಮ ಆಳವಾದ ಧ್ಯಾನದಲ್ಲಿ ಕಂಡುಕೊಂಡ ಸತ್ಯಗಳನ್ನು ವೇದಗಳು ಹೊಂದಿವೆ. ವೈದಿಕ ಋಷಿಗಳು ಬಹಳ ಉತ್ಸಾಹಭರಿತ ಜೀವನವನ್ನು ನಡೆಸಿದರು. *ಮಳೆ, ಗುಡುಗು, ಮಿಂಚು, ನೀರು, ಗಾಳಿ* – ಹೀಗೆ ಪ್ರಕೃತಿಯ ವಿವಿಧ ಸಂಗತಿಗಳಲ್ಲಿ ದೇವರ ಶಕ್ತಿಯನ್ನು ಅವರು ಕಂಡುಕೊಂಡರು. ಜೀವನವನ್ನು ಸರಿಯಾದ ದಾರಿಯಲ್ಲಿ ನಡೆಸಲು ದೇವರ ಸಹಾಯ ಕೋರಿ ಅವರು ವಿವಿಧ ಪ್ರಾರ್ಥನೆಗಳನ್ನು ರಚಿಸಿದರು; ಹಲವು ಬಗೆಯ ಯಜ್ಞಯಾಗಾದಿಗಳನ್ನು ಆಚರಿಸಿದರು. ಮಾನವ ನಿಃಸ್ವಾರ್ಥಿಯಾಗಿ ಬದುಕಬೇಕು, ಭಗವಂತನ ಶಕ್ತಿಯನ್ನು ಅರಿತು, ವಿನೀತಭಾವದಿಂದ ನಡೆದುಕೊಳ್ಳಬೇಕು ಎಂಬುದೇ ವೇದಕಾಲೀನ ಋಷಿಗಳ ಆಶಯವಾಗಿತ್ತು. ಜಗತ್ತಿನ ಆಧಾರವಾದ ದಿವ್ಯತೆಯನ್ನು ಹುಡುಕುವುದೇ ಅವರ ಜೀವನಧ್ಯೇಯವಾಗಿತ್ತು.

(ಮುಂದಿನ ತಿಂಗಳು: ಉಪನಿಷತ್ತುಗಳು)

### ನರೇಂದ್ರನಿಂದ ಕಲಿಯಬೇಕಾದ ಪಾಠಗಳು

### ಉಪಕಾರ ಮನೋಭಾವ



ಒಂದು ದಿನ ನರೇಂದ್ರ ಮತ್ತು ಹುಡುಗರೆಲ್ಲ ಸೇರಿ ವ್ಯಾಯಾಮ ಶಾಲೆಯ ಎದುರಿನಲ್ಲಿ ಒಂದು ಉಯ್ಯಾಲೆಯ ವ್ಯವಸ್ಥೆ ಮಾಡುತ್ತಿದ್ದರು. ಅದಕ್ಕಾಗಿ, ಭಾರವಾದ ತೊಲೆಯೊಂದನ್ನು ಹಗ್ಗ–ರಾಟೆಗಳ ಸಹಾಯದಿಂದ ಎತ್ತುತ್ತಿದ್ದರು. ಇದನ್ನು ನೋಡಲು ಜನರು ಸೇರಿದ್ದರು. ಆ ಗುಂಪಿನಲ್ಲಿ ಒಬ್ಬ ಬ್ರಿಟಿಷ್ ನಾವಿಕನೂ ಇದ್ದ. ನರೇಂದ್ರ ಅವನ ಸಹಾಯವನ್ನು ಕೋರಿದ. ಅವನು ಸಂತೋಷದಿಂದ ಒಪ್ಪಿಕೊಂಡು ಬಂದು ಕೈಹಾಕಿದ. ಅವನ ದುರದೃಷ್ಟಕ್ಕೆ ಭಾರವಾದ ತೊಲೆಯನ್ನು ಎತ್ತುವಾಗ, ಒಂದು ಹಗ್ಗ ಕಿತ್ತುಹೋಗಿ ಆ ತೊಲೆ ನಾವಿಕನ ತಲೆಗೆ ಜೋರಾಗಿ ತಗಲಿತು. ಆತ ಪ್ರಜ್ಞೆ ತಪ್ಪಿ ಬಿದ್ದುಬಿಟ್ಟ. ಅವನು ಸತ್ತೇ ಹೋದನೆಂದು ಭಾವಿಸಿ ಹುಡುಗರೆಲ್ಲ ಹೆದರಿ ಪರಾರಿಯಾದರು. ಸುತ್ತ ನೆರೆದಿದ್ದ ಜನರೂ ಮಂಗಮಾಯ! ಕಡೆಗೆ ಅಲ್ಲಿ ಉಳಿದುಕೊಂಡಿದ್ದವನು ನರೇಂದ್ರ ಮಾತ್ರವೇ. ನರೇಂದ್ರ ಸ್ವಲ್ಪವೂ ತಡಮಾಡದೆ ತನ್ನ ಧೋತಿಯನ್ನೇ ಹರಿದು, ಒಂದು ತುಂಡನ್ನು ನಾವಿಕನ ಗಾಯಕ್ಕೆ ಕಟ್ಟಿದ. ಬಳಿಕ ಮುಖದ ಮೇಲೆ ತಣ್ಣೀರನ್ನು ಸಿಂಪಡಿಸಿ, ಮೆಲ್ಲನೆ ಗಾಳಿ ಬೀಸಿದ. ನಂತರ ವೈದ್ಯರಿಗೆ ಹೇಳಿಕಳಿಸಿದ. ಒಂದು ವಾರದವರೆಗೆ ಅವನ ಸೇವೆ, ಶುಶ್ರೂಷೆಗಳನ್ನು ಮಾಡಿದ. ಆ ನಾವಿಕ ಎಂದಿನಂತಾದ. ಅನಂತರ ನರೇಂದ್ರ ತನ್ನ ಸ್ನೇಹಿತರಿಂದ ವಂತಿಗೆ ವಸೂಲು ಮಾಡಿ ಒಂದಿಷ್ಟು ಹಣ ಸೇರಿಸಿ, ಆ ನಾವಿಕನಿಗೆ ಕೊಟ್ಟ. ಆತನ ಸಹಾಯ–ಸಹಕಾರಗಳಿಗೆ ಕೃತಜ್ಞತೆಗಳನ್ನು ಸಮರ್ಪಿಸಿ ಅವನ ಮನೆಗೆ ಕಳಿಸಿಕೊಟ್ಟ.

**ನೀತಿ:** ಯಾರು ಇತರರಿಗಾಗಿ ಜೀವಿಸುತ್ತಾರೋ ಅವರು ಮಾತ್ರ ನಿಜವಾಗಿ ಜೀವಿಸುತ್ತಾರೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಆದ್ದರಿಂದ ನಾವು ಇತರರಿಗೆ ಸೇವೆ ಮಾಡಬೇಕು. ಅದರ ಮೂಲಕ ದೇವರನ್ನೇ ಪೂಜಿಸುತ್ತಿದ್ದೇವೆ ಎಂದು ಭಾವಿಸಬೇಕು.

**(ಮುಂದಿನ ತಿಂಗಳು: *ಶಿಕ್ಷಣದಿಂದ ಪಡೆಯಬೇಕಾದ ಗುಣಗಳು – ದೇಹಶಕ್ತಿ* )**

### ಪಂಚ ಮಾತೆಯರು: ಭಾರತ ಮಾತೆ

ಮಕ್ಕಳೇ, ನಮ್ಮ ದೇಶ ಎಂದರೆ ಯಾವುದು? ಉತ್ತರದಲ್ಲಿ ಜಮ್ಮು ಮತ್ತು ಕಾಶ್ಮೀರದಿಂದ ಹಿಡಿದು ದಕ್ಷಿಣದಲ್ಲಿ ಕನ್ಯಾಕುಮಾರಿಯವರೆಗೆ ಹಬ್ಬಿದ ಭೂಭಾಗ ಮಾತ್ರವೇ? ಈ ಭೂಭಾಗದಲ್ಲಿ ಹಬ್ಬಿರುವ ಬೆಟ್ಟಗುಡ್ಡಗಳು, ನದಿಕೊಳ್ಳಗಳೇ? ಅಥವಾ ಇಲ್ಲಿ ವಾಸಿಸುವ ಜನಸಮೂಹವೇ? ಅವೆಲ್ಲವೂ ಸೇರಿ ನಮ್ಮ ದೇಶವಾಗಿದೆ, ನಿಜ. ಆದರೆ ನಮ್ಮ ದೇಶವನ್ನು ತಾಯಿ ಎಂದು ನಾವು ಪೂಜಿಸುತ್ತೇವೆ. ಸ್ವಾಮಿ ವಿವೇಕಾನಂದರು, ನೀವು ಪೂಜಿಸುವ ಒಂದೇ ದೇವರು ಭಾರತಮಾತೆಯಾಗಲಿ ಎಂದು ಕರೆಕೊಟ್ಟರು. ಅದರ ಫಲವಾಗಿ ಭಾರತಮಾತೆಯ ಸೇವೆಯನ್ನೇ ಜೀವನದ ಧ್ಯೇಯವಾಗಿಟ್ಟುಕೊಂಡು, ಸಾವಿರಾರು ದೇಶಭಕ್ತರು ಸ್ವಾತಂತ್ರ್ಯಕ್ಕಾಗಿ ಹೋರಾಡಿ, ತಮ್ಮ ಜೀವವನ್ನೇ ಅರ್ಪಿಸಿದರು. ಆದ್ದರಿಂದಲೇ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿತು. ಮಕ್ಕಳೆ, ಅವರ ಬಲಿದಾನ ವ್ಯರ್ಥವಾಗದಂತೆ ನಾವು ನಡೆದುಕೊಳ್ಳಬೇಕು. ಭಾರತಮಾತೆಯ ಸೇವೆ ಎಂದರೆ, ಅವಳ ಮಕ್ಕಳಾದ ಬಡಜನರ, ದೀನದಲಿತರ ಸೇವೆ. ಅವರ ಸೇವೆ ಮಾಡುವುದೇ ನಮ್ಮ ಜೀವನದ ಗುರಿಯಾಗಬೇಕು.

### *ಯಾವುದೇ ಕೆಲಸವನ್ನು ಚೆನ್ನಾಗಿ ಮಾಡುವುದು ಹೇಗೆ?*

ನೀವು ಯಾವುದೇ ಕೆಲಸವನ್ನು ಮಾಡುವಾಗಲೂ ನಿಮ್ಮ ಮನಸ್ಸು, ಹೃದಯ, ನಿಮ್ಮ ಸರ್ವಸ್ವವನ್ನೂ ಆ ಕೆಲಸಕ್ಕೆ ಕೊಡಿ. ನಾನೊಮ್ಮೆ ಒಬ್ಬ ಸಾಧು ಮಹಾತ್ಮನನ್ನು ನೋಡಿದ್ದೆ. ಆತ ಪೂಜೆ, ಧ್ಯಾನಗಳನ್ನು ಎಷ್ಟು ಏಕಾಗ್ರತೆ ಶ್ರದ್ಧೆಗಳಿಂದ ಮಾಡುತ್ತಿದ್ದನೋ ಅಷ್ಟೇ ಸಾವಧಾನದಿಂದ ತನ್ನ ಅಡುಗೆ ಮಾಡುವ ಹಿತ್ತಾಳೆ ಪಾತ್ರೆಗಳನ್ನು ಥಳ ಥಳನೆ ಹೊಳೆಯುವ ಚಿನ್ನದಂತೆ ತೊಳೆದಿಡುತ್ತಿದ್ದನು.

*–ಸ್ವಾಮಿ ವಿವೇಕಾನಂದ*